ಪೌರಾಡಳಿತ ಮುನಿಸಿಪಾಲಿಟಿಗಳಲ್ಲಿ ಮೂಲಭೂತ ಸೌಲಭ್ಯಗಳು.

303 (454)

ಶ್ರೀ ಪಾಟೀಲ್ ಜೆ.ಟಿ.(ಬೀಳಗಿ); ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇನ್ನೂ ಅನೇಕ ಮುನಿಸಿಪಾಲಿಟಿ ಹಾಗೂ ಪಟ್ಟಣ ಪಂಚಾಯತ್‌ಗಳಿರುವ ಸ್ಥಳಗಳಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳನ್ನು (ಸ್ಯಾನಿಟೇಶನ್, ಡ್ರೈನೇಜ್, ಸರಿಯಾದ ಕುಡಿಯುವ ನೀರಿನ ಸೌಕರ್ಯ ಹಾಗೂ ಉತ್ತಮವಾದ ಬೀದಿಗಳು) ಹೊಂದದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ಕನಿಷ್ಟ ಸೌಲಭ್ಯಗಳನ್ನು ಹೊಂದದೇ ಇರುವ ಮುನಿಸಿಪಾಲಿಟಿ ಹಾಗೂ ಪಟ್ಟಣ ಪಂಚಾಯತ್‌ಗಳ ಸಂಖ್ಯೆ ಎಷ್ಟು; ವಿವರ ನೀಡುವುದು.

ಇ) ಇಂಥ ಸ್ಥಳಗಳಿಗೆ ಈ ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಸರಕಾರ ಕಾರ್ಯಕ್ರಮವನ್ನೇನಾದರೂ ರೂಪಿಸಿಕೊಂಡಿದೆಯೇ;

ಈ) ಸ್ವಸ್ತಿ ಗ್ರಾಮ ಹಾಗೂ ಸ್ವಚ್ಚ ಗ್ರಾಮ ಈ ಯೋಜನೆಗಳಂತೆ ಸ್ವಚ್ಛ ಮುನಿಸಿಪಾಲಿಟಿ ಹಾಗೂ ಸ್ವಚ್ಛ ಪಟ್ಟಣ ಪಂಚಾಯತಿ ಈ ರೀತಿಯ ಕಾರ್ಯಕ್ರಮಗಳನ್ನು ಸರಕಾರ ಕೈಗೊಳ್ಳುವುದೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಮೂಲಭೂತ ಸೌಕರ್ಯಗಳನ್ನು ಇನ್ನೂ ಉತ್ತಮಗೊಳಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳುತ್ತಿದೆ.

ಈ) ರಾಜ್ಯದಲ್ಲಿರುವ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ರಸ್ತೆಗಳ ಅಭಿವೃದ್ಧಿ, ಚರಂಡಿ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಈ ಕಾರ್ಯದ ಸಲುವಾಗಿ ಹುಡ್ಕೋ ಸಂಸ್ಥೆಯಿಂದ ರೂ.೧೦೦ ಕೋಟಿಗಳನ್ನು ಸಾಲ ಪಡೆದು, ಮಹಾನಗರಪಾಲಿಕೆಗಳಿಗೆ ತಲಾ ರೂ.೨ ಕೋಟಿ, ನಗರಸಭೆಗಳಿಗೆ ತಲಾ ರೂ.೧ ಕೋಟಿ, ಪುರಸಭೆಗಳಿಗೆ ತಲಾ ರೂ.೫೦

ಲಕ್ಷಗಳು ಹಾಗೂ ಪಟ್ಟಣ ಪಂಚಾಯತಿಗಳಿಗೆ ತಲಾ ರೂ.೨೫ ಲಕ್ಷಗಳಂತೆ ಮಂಜೂರು ಮಾಡಲಾಗಿದೆ.

ಸರ್ಕಾರಿ ಪ್ರೌಢ ಶಾಲೆಗಳಿಗೆ ವಸತಿ ನಿಲಯಗಳು.

304(455)

ಶ್ರೀ ಜೆ.ಟಿ.ಪಾಟೀಲ್(ಬೀಳಗಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2000-2001ನೇ ಸಾಲಿನಲ್ಲಿ ಮಂಜೂರಾದ ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಲ್ಲಿ ಕಲಿಯಲು ಬಂದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಅಲ್ಲಿ ವಸತಿ ನಿಲಯಗಳನ್ನು ಮಂಜೂರು ಮಾಡಲಾಗುವುದೇ;

ಆ) 2000-2001ನೇ ಸಾಲಿನಲ್ಲಿ ಹೊಸದಾಗಿ ಒಟ್ಟು ಎಷ್ಟು ವಸತಿ ಗೃಹಗಳನ್ನು ರಾಜ್ಯದಲ್ಲಿ ಮಂಜೂರು ಮಾಡಲಾಗಿದೆ; ವಿವರ ನೀಡುವುದು;

ಇ) ಬಾಗಲಕೋಟೆ ಜಿಲ್ಲೆಗೆ ಒಟ್ಟು ಎಷ್ಟು ವಸತಿ ಗೃಹಗಳನ್ನು ಮಂಜೂರು ಮಾಡಲಾಗಿದೆ? (ವಿವರ ಒದಗಿಸುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಹಣಕಾವಕಾಶದ ಲಭ್ಯತೆ ಹಾಗೂ ಅಗತ್ಯತೆಗೆ ಅನುಗುಣವಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗುವುದು.

ಆ) 2000-2001ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾದ ವಿದ್ಯಾರ್ಥಿನಿಲಯಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಇಲಾಖೆಗಳ ಹೆಸರು	ಹೊಸದಾಗಿ ಮಂಜೂರಾದ ವಿದ್ಯಾರ್ಥಿನಿಲಯಗಳ ಸಂಖ್ಯೆ
ಸಮಾಜ ಕಲ್ಯಾಣ ಇಲಾಖೆ	50
ಹಿಂದುಳಿದ ವರ್ಗಗಳ ಇಲಾಖೆ	24